

(6ನೇ ಪುಟದಿಂದ)

ಕಾರು ನಿಲ್ಲಿಸಿ ಅವರೂ ಇಳಿದು ಬಂದರು. ಒಂದು ಮರದ ಒಣಗಿದ ಕಾಂಡವನ್ನೇ ನಾನು ಸಬ್ಜೆಕ್ಟ್ ಅಂದಿದ್ದು. 'ಇದರಲ್ಲೇನ್ರೀ ವಿಶೇಷ?' ಎನ್ನುವುದು ಶ್ರೀನಿವಾಸರ ಪ್ರಶ್ನೆ.

'ನೋಡ್ತಾ ಇರಿ, ಫೋಟೊ ತೆಗೆದು ತೋರಿಸ್ತೀನಿ' ಅಂದು ನನ್ನ ಕೆಲಸದಲ್ಲಿ ಮಗ್ನನಾದೆ.

ಮರ ಒಣಗಿ, ಅದರ ರೆಂಬೆ ಕೊಂಬೆಗಳನ್ನೆಲ್ಲಾ ಕಡಿದು, ಬರೀ ಕಾಂಡವಷ್ಟೇ ಉಳಿದಿತ್ತು. ಒಂದೊಂದು ಕೋನದಿಂದ ಒಂದೊಂದು ರೀತಿ ಕಾಣುತ್ತಿದ್ದ ಆ ಮರ 'ಅ–ಮರ ಕಲಾಕೃತಿ'ಯಾಗುವ ಎಲ್ಲ ಸಾಧ್ಯತೆಗಳನ್ನೂ ಹೊಂದಿತ್ತು. ಹತ್ತಾರು ಫೋಟೊ ತೆಗೆದ ನಂತರ ಶ್ರೀನಿವಾಸ್ ಕೂಡಾ ಒಪ್ಪಿಕೊಂಡರು, 'ಹೌದ್ರೀ, ಇದೊಂದು ಕಲಾಕೃತಿ!'

ನಿಮಗೂ ಹಾಗೇ ಅನ್ನಿಸುತ್ತಾ?

